# ಡಾರ್ಕ್ ವೆಬ್‌ನಲ್ಲಿ ಭಾರತೀಯರ ಮಾಹಿತಿ!

■ **ಶಶಿಕುಮಾರ್ ಸಿ.**



ತಂತ್ರಜ್ಞಾನ ಲೋಕದಲ್ಲಿನ ಡೇಟಾ ಸೋರಿಕೆಯು ಇಡೀ ಪ್ರಪಂಚಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸುತ್ತಿದೆ. ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ರಾಷ್ಟ್ರಗಳು ಹಾಗೂ ತಂತ್ರಜ್ಞಾನ ಆಧಾರಿತ ಕಂಪನಿಗಳು ಜನಸಾಮಾನ್ಯರ ತಲೆಬೇನೆಯಾದ 'ಮಾಹಿತಿ ಸೋರಿಕೆ'ಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಈಗಾಗಲೇ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಆದರೂ ಹ್ಯಾಕರ್‌ಗಳು ಹೊಸ ಹೊಸ ಹಾದಿಗಳನ್ನು ಹುಡುಕಿಕೊಂಡು ಸಾರ್ವಜನಿಕರ ಮಾಹಿತಿಯ ಕಿಸಿಗೆ ಕೈಹಾಕುತ್ತಿದ್ದಾರೆ; ಕದ್ದ ಮಾಹಿತಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

ಮಾಹಿತಿ ಸೋರಿಕೆಯ ತಲೆಬೇನೆಯು ಭಾರತವನ್ನೂ ಬಿಟ್ಟಿಲ್ಲ. ಈಚೆಗೆ ಸುಮಾರು 70 ಲಕ್ಷಕ್ಕೂ ಅಧಿಕ ಭಾರತೀಯರ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಬಳಕೆದಾರರ ವೈಯಕ್ತಿಕ ವಿವರಗಳನ್ನು ಕದ್ದಿರುವ ಹ್ಯಾಕರ್‌ಗಳು ಅವುಗಳನ್ನು 'ಡಾರ್ಕ್ ವೆಬ್'ನಲ್ಲಿ ಹರಿಬಿಟ್ಟಿದ್ದಾರೆ. ಇದರಲ್ಲಿ ಸಾರ್ವಜನಿಕರ ಮೊಬೈಲ್ ಸಂಖ್ಯೆಗಳು ಮತ್ತು ಇಮೇಲ್ ವಿಳಾಸಗಳು ಕೂಡ ಸೇರಿವೆ ಎಂಬ ಆಘಾತಕಾರಿ ಮಾಹಿತಿಯನ್ನು ಇಂಟರ್‌ನೆಟ್ ಸೆಕ್ಯುರಿಟಿ ಸಂಶೋಧಕರು ಈಚೆಗೆ ಬಹಿರಂಗಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಡಿಜಿಟಲ್ ತಂತ್ರಜ್ಞಾನಕ್ಕೆ ಒಗ್ಗಿಕೊಳ್ಳುತ್ತಿರುವ ಸಾರ್ವಜನಿಕರು ಇನ್ನಷ್ಟು ಎಚ್ಚರಿಕೆಯಿಂದ ಇರುವ ಅಗತ್ಯ ಎದುರಾಗಿದೆ.

2010–2020ರ ನಡುವಿನ ಅವಧಿಯಲ್ಲಿ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್ ಹೊಂದಿರುವ ಭಾರತೀಯರ ಫೋನ್ ಸಂಖ್ಯೆಗಳು ಮತ್ತು ಇಮೇಲ್ ವಿಳಾಸಗಳು ಸೇರಿದಂತೆ ವೈಯಕ್ತಿಕ ವಿವರಗಳು ಡಾರ್ಕ್ ವೆಬ್‌ನಲ್ಲಿ ಹರಿದಾಡುತ್ತಿವೆ. ಈ ಮಾಹಿತಿಯಲ್ಲಿ ಬಳಕೆದಾರರ ಹೆಸರು, ಉದ್ಯೋಗದಾತ ಸಂಸ್ಥೆಗಳು ಮತ್ತು ವಾರ್ಷಿಕ ಆದಾಯದ ಮಾಹಿತಿಯೂ ಇದೆ ಎಂದು ಭದ್ರತಾ ಸಂಶೋಧನಾ ವಿಭಾಗದ ಅಧಿಕಾರಿ ರಾಜಶೇಖರ್ ರಾಜಹರಿಯಾ ಮಾಹಿತಿ ನೀಡಿದ್ದಾರೆ.

ಈ ಮಾಹಿತಿಯು ಹಣಕಾಸು ಸಂಬಂಧಿತ ದತ್ತಾಂಶವಾಗಿರುವುದರಿಂದ, ಹ್ಯಾಕರ್ಸ್ ಮತ್ತು ಹಗರಣಕಾರರಿಗೆ ಅವರು ಫಿಶಿಂಗ್ ಅಥವಾ ಇತರ ದಾಳಿಗಳಿಗಾಗಿ ಈ ವೈಯಕ್ತಿಕ ಸಂಪರ್ಕ ವಿವರಗಳನ್ನು ಬಳಸಿಕೊಳ್ಳಬಹುದು ಎಂಬ ಆತಂಕವೂ ಇದೆ. ಗ್ರಾಹಕರಿಗೆ ಕ್ರೆಡಿಟ್ / ಡೆಬಿಟ್ ಕಾರ್ಡ್‌ಗಳನ್ನು ಮಾರಾಟ ಮಾಡಲು ಬ್ಯಾಂಕುಗಳು ಒಪ್ಪಂದ ಮಾಡಿಕೊಂಡಿರುವ ತೃತೀಯ ಸೇವಾ ಪೂರೈಕೆದಾರರಿಂದ ಈ ರೀತಿಯ ಡೇಟಾ ಸೋರಿಕೆ ಆಗಿರಲೂಬಹುದು ಎನ್ನಲಾಗಿದೆ. ಸೋರಿಕೆಯಾದ ಡೇಟಾಬೇಸ್‌ನಲ್ಲಿ 5 ಲಕ್ಷಕ್ಕೂ ಅಧಿಕ ಪ್ಯಾನ್ ಸಂಖ್ಯೆಗಳಿವೆ. ಇಷ್ಟೆಲ್ಲ ಮಾಹಿತಿಯನ್ನು ಯಾರಾದರೊಬ್ಬ ವ್ಯಕ್ತಿ ಅಥವಾ ಸಂಸ್ಥೆಯು ಸಂಗ್ರಹಿಸಿ, ಅದನ್ನು ಡಾರ್ಕ್ ವೆಬ್‌ನಲ್ಲಿ ಮಾರಾಟ ಮಾಡಿರುವ ಸಾಧ್ಯತೆಯೂ ಇದೆ ಎನ್ನಲಾಗಿದೆ. ■

## 'ಅಮೆಜಾನ್ ಪ್ರೈಮ್'ನಲ್ಲಿ ವಾಚ್ ಪಾರ್ಟಿ

ಕೊರೊನಾ ವೈರಸ್‌ನ ಆರ್ಭಟದ ಸಮಯದಲ್ಲಿ ಅತ್ಯಂತ ಹೆಚ್ಚು ಮುನ್ನೆಲೆಗೆ ಬಂದ ವಿಚಾರಗಳ ಪೈಕಿ ವಿಡಿಯೊ ಸ್ಟ್ರೀಮಿಂಗ್ ಸೇವೆಯೂ ಒಂದು. ಅದರಲ್ಲೂ ತುಸು ಹೆಚ್ಚಾಗಿಯೇ ಗ್ರಾಹಕರನ್ನು ಆಕರ್ಷಿಸಿ ಭರಪೂರ್ತಿ ಮನರಂಜನೆ ಒದಗಿಸಿ ಸದ್ದು ಮಾಡಿದ್ದು 'ಅಮೆಜಾನ್ ಪ್ರೈಮ್' ವಿಡಿಯೊ ಸ್ಟ್ರೀಮಿಂಗ್. ತನ್ನ ಗ್ರಾಹಕರಿಗೆ ಇನ್ನಷ್ಟು ಉತ್ತಮ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಫೇಸ್‌ಬುಕ್‌ನ ವಾಚ್ ಪಾರ್ಟಿ ಮಾದರಿಯನ್ನೇ ಹೋಲುವಂತಹ 'ಅಮೆಜಾನ್ ಪ್ರೈಮ್ ವಿಡಿಯೊ ವಾಚ್ ಪಾರ್ಟಿ' ಎಂಬ ಹೊಸ ಫೀಚರ್ ಅನ್ನು ಪರಿಚಯಿಸಿದೆ.

ಈ ಫೀಚರ್‌ನಿಂದಾಗಿ ಅಮೆಜಾನ್ ಪ್ರೈಮ್ ವಿಡಿಯೊದ ಬೇರೆ ಸದಸ್ಯರೂ ಯಾವುದೇ ಶುಲ್ಕವಿಲ್ಲದೆ ವಿಡಿಯೊಗಳನ್ನು ನೋಡಬಹುದು. ಚಲನಚಿತ್ರ ಅಥವಾ ಟೀವಿ ಸೀರಿಯಲ್ ಮತ್ತು ಅವರು ತಮ್ಮ ಸ್ನೇಹಿತರೊಂದಿಗೆ ಪರಸ್ಪರ ದೂರವಿದ್ದು, ವೀಕ್ಷಿಸಲು ಅನುವು ಮಾಡಿಕೊಡಲಿದೆ. ವಾಚ್‌ಪಾರ್ಟಿ ಫೀಚರ್ ಬಳಸಿ 100 ಪ್ರೈಮ್ ಚಂದಾದಾರರು ಅಥವಾ ಪ್ರೈಮ್ ವಿಡಿಯೋ ಚಂದಾದಾರರು ತಮ್ಮ ಡೆಸ್ಕ್‌ಟಾಪ್ ಅಪ್ಲಿಕೇಷನ್‌ಗಳಿಂದ ತಮ್ಮ ಸ್ನೇಹಿತರು ಮತ್ತು ಕುಟುಂಬದೊಂದಿಗೆ ವಿಡಿಯೊಗಳನ್ನು ವೀಕ್ಷಿಸಬಹುದು. ಪ್ರೈಮ್ ವಿಡಿಯೊದ ಮೊಬೈಲ್ ಆವೃತ್ತಿಯಿಂದಲೂ ಫೀಚರ್ ಬಳಸಬಹುದು.




### ಆಯ್ಕೆ ಹೇಗೆ?

ಬೆಂಬಲಿತ ವೆಬ್ ಬ್ರೌಸರ್‌ನಲ್ಲಿ ಮೊದಲು ಅಮೆಜಾನ್ ಪ್ರೈಮ್ ವಿಡಿಯೊ ಅಥವಾ ಮೊಬೈಲ್‌ನಲ್ಲಿನ ಅಮೆಜಾನ್ ಪ್ರೈಮ್ ವಿಡಿಯೊ ಆ್ಯಪ್ ಅನ್ನು ತೆರೆಯಿರಿ. ಬಳಿಕ ಪರದೆಯ ಮೇಲೆ ಕಾಣುವ ವಾಚ್ ಪಾರ್ಟಿ ಐಕಾನ್ ಕ್ಲಿಕ್ ಮಾಡಿ. 'ವಾಚ್ ಪಾರ್ಟಿ'ಗೆ ಅರ್ಹವಾದ ವಿಡಿಯೊಗಳ ಪಟ್ಟಿಯ ಪೈಕಿ ನಿಮಗಿಷ್ಟವಾದ ವಿಡಿಯೊ ಆಯ್ಕೆ ಮಾಡಿ. ವಾಚ್ ಪಾರ್ಟಿಯಲ್ಲಿ ಚಾಟ್ ಮಾಡುವಾಗ ನೀವು ನಿಮಗಾಗಿ ಬಳಸಲು ಬಯಸುವ ಹೆಸರನ್ನು ನಮೂದಿಸಿ. ನೀವು ಹೆಸರನ್ನು ಆಯ್ಕೆ ಮಾಡಿದ ನಂತರ, ಕೆಳಗೆ ಲಭ್ಯವಿರುವ ನಿಮ್ಮ ವಾಚ್ ಪಾರ್ಟಿ ರಚಿಸಿ ಬಟನ್ ಟ್ಯಾಪ್ ಮಾಡಿ. ವಾಚ್ ಪಾರ್ಟಿ ಲಿಂಕ್ ಅನ್ನು 100 ಜನರೊಂದಿಗೆ ಹಂಚಿಕೊಳ್ಳಬಹುದು. ಆ ಲಿಂಕ್ ಅನ್ನು ಕ್ಲಿಕ್ ಮಾಡುವುದರ ಮೂಲಕ ಸೇರಬಹುದು. ■